# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 27/2025

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಮಂಜುನಾಥ | ಫ್ರಾಸಾಃ | 05 |
| **ತಂದೆಯ ಹೆಸರುಃ** | ನರಸಿಂಹಪ್ಪ | ಚಾಸಾಃ | 08 |
| **ವಯಸ್ಸುಃ** | 26 | ಪ್ರಮಾಣ ವಚನ ಭೋದಿಸಿದ ದಿನಾಂಕ: | 13.10.2025 |
| **ಉದ್ಯೋಗಃ** | ಕೂಲಿ | | |
| **ವಾಸ ಸ್ಥಳಃ** | ಸೀಕಲ್ಲೂ | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಿಪಿ-*2* ರಲ್ಲಿರುವ ಸಹಿ ನನ್ನದು*.* ಅದನ್ನು ನಿಪಿ-*2(*ಇ*)* ಎಂದು ಗುರುತಿಸಲಾಯಿತು*.* ಸುಮಾರು *5-6* ವರ್ಷಗಳ ಹಿಂದೆ ನನ್ನ ಹೆಂಡತಿಯನ್ನು ಚಿಕಿತ್ಸೆಗಾಗಿ ಆರೋಪಿಯ ಬಳಿ ಕರೆದುಕೊಂಡು ಹೋಗಿದ್ದೆ*.* ಆರೋಪಿ ನನ್ನ ಹೆಂಡತಿಗೆ ಇಂಜೆಕ್ಷನ್ ಕೊಟ್ಟಿದ್ದ*.* ಅಷ್ಟೊತ್ತಿಗೆ ಅಲ್ಲಿಗೆ ಪೋಲಿಸರು ಕೇವು ಜನರೊಂದಿಗೆ ಬಂದರು*.* ಅಲ್ಲಿ ಪೋಲಿಸರು ನನಗೆ ಸಹಿ ಹಾಕುವಂತೆ ಹೇಳಿ ಸಹಿ ಪಡೆದರು*.* ಮು*.*ಮಾ*.01* ರಿಂದ ಮು*.*ಮಾ*.43* ನ್ನು ನಾನು ನೋಡಿಲ್ಲ*.*

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿ.20-12-2018 ರಂದು ಚಾಸಾ-1 ರಿಂದ ಚಾಸಾ-6, ಚಾಸಾ-10 ರಿಂದ ಚಾಸಾ-12 ರವರು ಆರೋಪಿಯ ನಕಲಿ  ಕ್ಲಿನಿಕ್ ಮೇಲೆ ದಾಳಿ ಮಾಡಿ ನನ್ನ ಸಮಕ್ಷಮ ನಿಪಿ-2 ಮಹಜರ್

ಜರುಗಿಸಿದಾಗ ಪಂಚನಾಗಿ ಸಹಿ ಮಾಡಿದ್ದು , ನನ್ನ ಸಮಕ್ಷಮ ಮು.ಮಾ.01 ರಿಂದ 43 ನ್ನು ಅಮಾನತ್ತು ಪಡಿಸಿಕೊಂಡಾಗ ಸಾಕ್ಷಿಯಾಗಿದ್ದು , ನಾನು ----------ಗುರುತಿಸುತ್ತೇನೆ ನಿಪಿ.3 ರಂತೆ ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಆರ್.ಬಿ. ವಕೀಲರಿಂದ ಪಾಟೀ ಸವಾಲು**

ನನ್ನ ಹೆಂಡತಿಗೆ ಚಿಕಿತ್ಸೆ ಪಡೆದುಕೊಂಡ ವಿಚಾರ ಪೋಲಿಸರಿಗೆ ಹೇಳಿಲ್ಲ. ನಾನು ಸ್ಥಳದಲ್ಲಿ ನಿಪಿ-2 ಕ್ಕ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ13.10.2025 **(ಕೆ.ಎಂ.ರಾಜಶೇಖರ)**
ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.